ನೀನು ಹೀಗೆಲ್ಲಾ ಅತ್ರೆ ನಂಗೆ ತುಂಬಾ ಸಂಕ್ಟ ಆಗುತ್ತೆ..' ಅವನೆಂದಾಗ ರುಕ್ಮಿಣಿಯವರು ಸಮಾಧಾನವಾಗಲೇ ಬೇಕಾಯಿತು. ಬಟ್ಟೆ ಬದಲಿಸಿ, ಗಾಯವನ್ನು ತೊಳೆದು ಪ್ರಥಮ ಚಿಕಿತ್ಸೆ ಮಾಡಿಕೊಂಡು ಬಂದ ಹೇಮಂತ. ರುಕ್ಮಿಣಿಯವರು ಕೋಟೆಬಂಗಲೆಯವರ ಬಗ್ಗೆ ವಿಚಾರಿಸಿದರು.

ಹೇಮಂತ ಅಲ್ಲಿನವರ ಕುರಿತಾಗಿ, ಬಂಗಲೆಯ ಕುರಿತಾಗಿ ವರ್ಣಿಸಿದ. ಅಪ್ಪಿತಪ್ಪಿಯೂ ಟೆರೇಸಿನಲ್ಲಿ ವ್ಯಕ್ತಿಯೊಂದು ತಮ್ಮನ್ನು ಗಮನಿಸುತ್ತಿದ್ದ ಪ್ರಕರಣವನ್ನು ಹೇಳಲಿಲ್ಲ.

'ನಂಗೀಗ ಸಮಾಧಾನವಾಯ್ತಪ್ಪಾ, ಚಿನ್ನದಂತಹ ಹುಡ್ಗಿ ಋತು, ಅಷ್ಟು ಶ್ರೀಮಂತಿಕೆ ಇದ್ರೂ ಸರಳ ಸುಂದರಿ....ಅವ್ಳು ನಿನಗಾಗಿಯೇ ಹುಟ್ಟಿದವ್ಳು ಕಣೋ, ಅವ್ಳನ್ನು ಕೊನೆಯವರೆಗೂ ಚೆನ್ನಾಗಿ ನೋಡ್ಕೋ...'

ತಾಯಿಯ ಮಾತಿಗೆ ನಸುನಕ್ಕು ಹೇಮಂತನೂ ತಲೆಯಾಡಿಸಿದ. ಕೋಲು ಮುಖದ, ಬೊಗಸೆ ಕಂಗಳ ಋತು ಕಣ್ಮುಂದೆ ಸುಳಿದಂತಾಯಿತು.

ತಾಯಿಗೆ ಗುಡ್‌ನೈಟ್ ಹೇಳಿ ಮಲಗಿಕೊಂಡವನನ್ನು ಗಾಢ ನಿದ್ರೆ ಆವರಿಸಿತು.

ನಿತ್ಯದಂತೆ ಸೂರ್ಯೋದಯದ ಹೊತ್ತಿಗೆ ಎಚ್ಚರವಾಯಿತು. ಹತ್ತಿರದಲ್ಲೇ ಇರುವ ಜಿಮ್‌ಗೆ ಹೋಗಿ ಒಂದಷ್ಟು ಕಸರತ್ತುಗಳನ್ನು ಮಾಡುವ ಅಭ್ಯಾಸ ಅವನದು. ಮೇಲೆದ್ದವನಿಗೆ ಮೊಬೈಲಿನಲ್ಲಿ ಎರಡು ಮೆಸೇಜುಗಳಿದ್ದುದು ಕಾಣಿಸಿತು. ಮೊದಲ ಸಂದೇಶ ಋತುವಿನದಾಗಿತ್ತು. ಈ ದಿನ ತಮ್ಮೊಂದಿಗೆ ಲಾಲ್‌ಬಾಗಿಗೆ ಬರಬೇಕೆಂದು ಕರೆದಿದ್ದಳು. ಎರಡನೆಯ ಸಂದೇಶ ಗೆಳೆಯ ಅಜಯ್ ಕುಲಕರ್ಣಿಯದಾಗಿತ್ತು. ತನಿಖೆಯ ಸಂಬಂಧವಾಗಿ ಕೆಲವು ವಿಷಯಗಳನ್ನು ಮಾತನಾಡಬೇಕೆಂದೂ, ತನ್ನ ಮನೆಗೆ ಬೆಳಗಿನ ಉಪಾಹಾರಕ್ಕೆ ಬರಬೇಕೆಂದೂ ಸಂದೇಶ ಕಳುಹಿಸಿದ್ದ. ಸದ್ಯಕ್ಕೆ ಎರಡನೆಯ ಸಂದೇಶಕ್ಕೆ ಓಗೊಡುವುದೇ ಒಳ್ಳೆಯದೆನಿಸಿತು ಅವನಿಗೆ.

ಋತುವಿಗೆ 'ಸಾರಿ ಡಿಯರ್, ಐಯ್ಯಾಮ್ ಬ್ಯುಸಿ' ಎಂಬ ಚುಟುಕು ಸಂದೇಶ ಕಳುಹಿಸಿ, ಬರುತ್ತೇನೆಂಬ ಸಂದೇಶವನ್ನು ಅಜಯ್ ಕುಲಕರ್ಣಿಗೆ ರವಾನಿಸಿದ.

* * *

ಮರುದಿನ ಬೆಳಿಗ್ಗೆ ಬೇಗನೆ ಎದ್ದ ಋತು ಮೊಬೈಲಿನಲ್ಲಿದ್ದ ಹೇಮಂತನ ಸಂದೇಶವನ್ನು ಗಮನಿಸಿದಳು. ಅವನು ಬರುವುದಿಲ್ಲವೆಂದು ತಿಳಿದಾಗ ಒಂದು ಕ್ಷಣ ನಿರಾಸೆಯಾದರೂ ಸಾವರಿಸಿಕೊಂಡಳು.

ನಗರದ ಪ್ರಖ್ಯಾತನಾದ ಪತ್ತೇದಾರ....ಕೊಲೆಯ ತನಿಖೆಯಲ್ಲಿ ಬಿಜಿಯಾಗಿರಬೇಕಾದರೆ ತನ್ನೊಡನಾಟ ಅವನ ವೃತ್ತಿಗೆ ಯಾವ ವಿಧದಲ್ಲೂ ತೊಂದರೆಯಾಗಬಾರದಲ್ಲವೇ?... ಮುಖ ತೊಳೆದು ರಿಫ್ರೆಷ್ ಆಗಿ ಮೆಟ್ಟಿಲಿಳಿದು ಕೆಳ ಬಂದಳು. ಕಲಾವತಿ ಎಂದಿನಂತೆ ಬೇಗನೆದ್ದು ಅಡುಗೆಮನೆಯಲ್ಲಿದ್ದರು. ಋತುವನ್ನು ನೋಡಿ ಕಣ್ಣರಳಿಸಿದರು. ರಜಾ ದಿನಗಳಲ್ಲಿ ಬೇಗನೇ ಏಳದ ಅವಳನ್ನು ನೋಡಿ ಆಶ್ಚರ್ಯವಾಯಿತು.

'ಬಂಗಲೆಯ ರಾಜಕುಮಾರಿ ಇವತ್ತು ಬೇಗನೇ ಎದ್ಬಿಟ್ಟಿದ್ದಾಳೆ...!.'

'ಚಿಕ್ಕಮ್ಮ....ಹೇಗೂ ರಮ್ಯಾನೂ ಇವತ್ತು ಬಂಗಲೆಯಲ್ಲೇ ಇದ್ದಾಳೆ, ನಾವೆಲ್ಲಾ ಸಣ್ಣ ಟ್ರಿಪ್ ಹೋಗ್ಬರೋಣ್ವಾ ಚಿಕ್ಕಮ್ಮ, ಎಲ್ಲಾ ಒಟ್ಟಿಗೆ ಹೋಗಿ ಎಷ್ಟೊಂದು ದಿನಗಳಾದ್ವು.....' ಮುದ್ದುಗರೆಯುತ್ತಾ ಚಿಕ್ಕಮ್ಮನ ಭುಜಕ್ಕೆ ಜೋತು ಬಿದ್ದಳು.

ಟ್ರಿಪ್ ಹೋಗುವುದೆಂದರೆ ಕಲಾವತಿಗೂ ಇಷ್ಟವೇ. ಎಷ್ಟೇ ಕಾಲುನೋವಿದ್ದರೂ ಎಲ್ಲವನ್ನೂ ಮರೆತು ಹೊಸಹುರುಪಿನಿಂದ ಸಿದ್ಧವಾಗುತ್ತಾರೆ. ಕಳೆದ ಬಾರಿ ಪಂಚಲಿಂಗಗಳಿರುವ ತಲಕಾಡಿಗೆ ಹೋಗಿದ್ದಾಗ ಪಾದ ಹೂತು ಹೋಗುವ ಮರಳಿನ ದಿಬ್ಬಗಳಲ್ಲಿ ನಿರಾಯಾಸವಾಗಿ ನಡೆದು ಎಲ್ಲರನ್ನೂ ಚಕಿತಗೊಳಿಸಿದ್ದರು.

'ಬಿಸಿ ಮರಳಿನೊಳಗೆ ಹೆಜ್ಜೆ ಊರಿದರೆ ಮತ್ತ್ಯಾವತ್ತೂ ಕಾಲುನೋವು ಬರಲ್ಲವಂತೆ ಗೊತ್ತಾ?...' ಎಂದವರು ಬಂಗಲೆಯಲ್ಲಿ ಮತ್ತೆ ಹದಿನೈದು ದಿನ ಕಾಲುನೋವಿನಿಂದ ನರಳಿದ್ದರು. ಆದರೂ ಎಲ್ಲರೊಂದಿಗೆ ಪ್ರವಾಸ ಹೋಗುವುದೆಂದರೆ ವಿಶೇಷವಾದ ಆನಂದ ಕಲಾವತಿಗೆ.

ಈಗಲೂ ಅಷ್ಟೇ. ಋತು ಟ್ರಿಪ್ ಎಂದಾಕ್ಷಣ ಮುಖ ಅರಳಿತು.

'ಎಲ್ಲಿಗೆ ಟ್ರಿಪ್ ಹೋಗ್ಬೇಕೂಂತ ಡಿಸೈಡ್ ಮಾಡಿದ್ದಿ, ಹೇಳು ಮೊದ್ಲು..'

'ಲಾಲ್‌ಬಾಗಿಗೆ ಹೋಗೋಣ ಚಿಕ್ಕಮ್ಮ, ನಾನು ಚಿಕ್ಕವಳಿದ್ದಾಗ ಹೋಗಿದ್ವಲ್ಲಾ....ಮತ್ತೆ ನಾವಲ್ಲಿಗೆ ಹೋಗೇ ಇಲ್ಲ...'

## ಇಲ್ಲಿಯವರೆಗೆ



ಶನಿವಾರ ಸಂಜೆ ಹೇಮಂತ ಕೋಟೆ ಬಂಗಲೆಗೆ ಬರುವುದು ನಿರ್ಧಾರವಾಗಿ ಹೇಮಂತ ಬರುತ್ತಾನೆ. ರಮ್ಯಳಿಗೂ ಆಹ್ವಾನ ನೀಡಿದಳು ಋತು. ಕಲಾವತಿ ಬಾದಾಮಿ ಖೀರು ತಯಾರಿಸಿ ದೇವರಿಗೆ ನೈವೇದ್ಯ ಮಾಡುವಂತೆ ಋತುವಿಗೆ ಹೇಳುತ್ತಾಳೆ. ಅದರಂತೆ ಋತು ದೇವರಿಗೆ ನೈವೇದ್ಯ ಮಾಡುತ್ತಿರುವಾಗ ಕಪ್ಪು ಬೆಕ್ಕು ಅಡ್ಡಬಂದು ಖೀರನ್ನು ಚೆಲ್ಲಿ ಓಡಿ ಹೋಗುತ್ತದೆ. ಋತು ಗಾಬರಿಯಾಗುತ್ತಾಳೆ. ಹೇಮಂತ ಬಂದಾಗ ಮನೆಯಲ್ಲಿ ಸಂಭ್ರಮದ ವಾತಾವರಣ ಉಂಟಾಗುತ್ತದೆ. ಹೇಮಂತ ಎಲ್ಲರಿಗೂ ಇಷ್ಟವಾಗುತ್ತಾನೆ. ಋತು ಬಂಗಲೆಯನ್ನು ಹೇಮಂತನಿಗೆ ತೋರಿಸುತ್ತಾಳೆ. ಆಮೇಲೆ ಟೆರೇಸ್ ಮೇಲೆ ಹೋಗುತ್ತಾರೆ. ಇಬ್ಬರೂ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಿರುತ್ತಾರೆ. ಪ್ರೇಮದ ಮುದ್ರೆಯೊತ್ತುತ್ತಿರುವಾಗ ಯಾರೋ ಇವರಿಬ್ಬರನ್ನು ಗಮನಿಸುತ್ತಿರುವುದು ಇಬ್ಬರ ಅರಿವಿಗೂ ಬಂದು ಗಾಬರಿಗೊಳ್ಳುತ್ತಾರೆ. ಆದರೂ ನಿಶ್ಚಿತಾರ್ಥದ ದಿನಾಂಕ ಗೊತ್ತು ಮಾಡುವ ಬಗ್ಗೆ ಮಾತನಾಡುತ್ತಾರೆ.

ಲಾಲ್‌ಬಾಗಿಗೆಂದಾಗ ಕಲಾವತಿಯ ಮುಖವೂ ಅರಳಿತು.

'ನಿಮ್ಮ ಪಪ್ಪ ವಾಕಿಂಗ್ ಹೋಗಿದ್ದಾರೆ, ಅವರು ಬಂದ ಕೂಡ್ಲೇ ಅವ್ರನ್ನು ಒಪ್ಸಿಬಿಡು, ನಾನು ಬೇಗ ತಿಂಡಿ ಸಿದ್ಧ ಮಾಡ್ತೀನಿ, ಭರತನಿಗೆ ಮಧ್ಯಾಹ್ನದ ಊಟವನ್ನು ಡೈನಿಂಗ್ ಟೇಬಲ್ಲಿನ ಮೇಲಿಟ್ರೆ ಅವ್ನು ಸದ್ದಿಲ್ದೆ ಊಟ ಮಾಡಿಕೊಳ್ತಾನೆ..' ಕಲಾವತಿ ತನ್ನ ಎಂದಿನ ಧಾಟಿಯಲ್ಲಿ ಮಾತಿಗೆ ತೊಡಗಿದಾಗ ಋತುವಿಗೂ ಸಂತೋಷವಾಯಿತು.

ಪ್ರತಿದಿನವೂ ಕೆರೆದಂಡೆಯವರೆಗೆ ವಾಯುವಿಹಾರ ಮಾಡುವ ತಂದೆಯನ್ನು ಋತು ನಿರೀಕ್ಷಿಸತೊಡಗಿದಳು. ಸ್ವಲ್ಪ ಹೊತ್ತಿಗೆಲ್ಲಾ ಹಿಂದಿರುಗಿದ ಪುರುಷೋತ್ತಮರನ್ನೂ ಒಪ್ಪಿಸಿದಳು.

'ಆಯ್ತಮ್ಮಾ, ನಿನ್ನ ಇಷ್ಟಕ್ಕೆ ನಾನ್ಯಾಕೆ ಅಡ್ಡಿ ಬರ್ಲಿ. ಎಲ್ಲರೂ ಬೇಗ ತಯಾರಾಗಿ, ಲಾಲ್‌ಬಾಗಿಗೆ ಹೋಗ್ಬರೋಣ, ನಾವೆಲ್ಲಾ ಅಲ್ಲಿಗೆ ಹೋಗಿ ಎಷ್ಟೋ ವರ್ಷಗಳಾದ್ವು....'

ತಂದೆಯಿಂದಲೂ ಒಪ್ಪಿಗೆ ಸಿಕ್ಕಿದ ಮೇಲೆ ಋತುವಿಗೆ ನಿರಾಳವಾಯಿತು. ಎಲ್ಲರೂ ತುಂಬು ಉತ್ಸಾಹದಿಂದ ಲಘು ಉಪಾಹಾರ ಸೇವಿಸಿ ಹೊರಡಲು ಸಿದ್ಧವಾದರು. ಕಲಾವತಿ ಸುಂದರಿಯನ್ನು ಕರೆದು ಬಂಗಲೆಯ ಮೇಲೆ, ವಿಶೇಷವಾಗಿ ಭರತನ ಮೇಲೆ ನಿಗಾ ವಹಿಸಬೇಕೆಂದು ಹೇಳುವುದನ್ನು ಮರೆಯಲಿಲ್ಲ. ಪುರುಷೋತ್ತಮರ ಕುಟುಂಬ ರಮ್ಯಾಳೊಂದಿಗೆ ಕಾರಿನಲ್ಲಿ ವಿಹಾರ ಹೊರಟಿತ್ತು. ಪುರುಷೋತ್ತಮರೇ ಡ್ರೈವ್ ಮಾಡುತ್ತಿದ್ದರು. ಪಕ್ಕದಲ್ಲಿ ಕಲಾವತಿ, ಹಿಂಬದಿಯ ಸೀಟಿನಲ್ಲಿ ಋತು ಹಾಗೂ ರಮ್ಯ ಕುಳಿತರು.

ಕೋಟೆ ಬಂಗಲೆ ಉನ್ನತಿಯಲ್ಲಿ ಮೂರು ಕಾರುಗಳಿವೆ. ಆದರೆ ಯಾವ ಕಾರುಗಳಿಗೂ ಡ್ರೈವರ್ ಇಲ್ಲ. ಕಲಾವತಿಯೂ ಸೇರಿದಂತೆ ಅವರವರ ಕಾರನ್ನು ಅವರವರೇ ಉಪಯೋಗಿಸಿಕೊಳ್ಳುತ್ತಾರೆ. ಋತುವಿನ ತಾಯಿ ಡ್ರೈವರಿನ ಹಿಂದೆ ಓಡಿಹೋದ ಮೇಲೆ ಪುರುಷೋತ್ತಮರು ಯಾವ ಡ್ರೈವರನ್ನೂ ನಂಬುವುದಿಲ್ಲ.